AUGUST, 03 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಪೋಷಣ್ ಟ್ರ್ಯಾಕರ್ ಮಾಹಿತಿ; 5 ವರ್ಷದೊಳಗಿನ, 7 ಸಾವಿರದ 187 ಮಕ್ಕಳು, ರಾಜ್ಯದಲ್ಲಿ, ತೀವ್ರ ಅಪೌಷ್ಟಿಕತೆಯಿಂದ, ಬಳಲಿಕೆ.**
- **ವರದಾ ಹಾಗೂ ಬೇಡ್ತಿ ನದಿಗಳ ಜೋಡಣೆ; ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಪ್ರಾಧಿಕಾರ, ತಾತ್ವಿಕ ಒಪ್ಪಿಗೆ.**
- **ರಸಗೊಬ್ಬರ ಮಾರಾಟದಲ್ಲಿ, ನಿಯಮ ಉಲ್ಲಂಘನೆ; ಕೃಷಿ ಇಲಾಖೆಯಿಂದ, ಕಠಿಣ ಕಾನೂನು ಕ್ರಮ.**
- **ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆ, ಯೋಜನೆ; ಬಳ್ಳಾರಿಯ ಶಿವಾರೆಡ್ಡಿ ದಂಪತಿ, ಯಶಸ್ವಿ ಉದ್ಯಮಿ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಅಂಗನವಾಡಿ ಮಕ್ಕಳಿಗೆ, ಸಮಗ್ರ ಪೌಷ್ಟಿಕ ಆಹಾರ ಹಾಗೂ ಸಮರ್ಪಕ ಮೂಲ ಸೌಕರ್ಯ ಕಲ್ಪಿಸಲು, ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು, ಮಕ್ಕಳಲ್ಲಿ ಅಪೌಷ್ಟಿಕತೆ ನಿರ್ಮೂಲನೆ, ರಾಜ್ಯ ಸಮಿತಿಯ, ನಿಯೋಜಿತ ಅಧ್ಯಕ್ಷ, ವಿಶ್ರಾಂತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲ ಗೌಡ, ಆದೇಶಿಸಿದ್ದಾರೆ. ಬೆಂಗಳೂರಿನ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯಲ್ಲಿ, ಸಮಿತಿ ಸಭೆ ನಡೆಸಿ, ಅವರು ಮಾತನಾಡಿದರು. ಪ್ರಸಕ್ತ ಜೂನ್ ಅಂತ್ಯಕ್ಕೆ 5 ವರ್ಷದೊಳಗಿನ 31 ಲಕ್ಷ 19 ಸಾವಿರದ 918 ಮಕ್ಕಳನ್ನು, ಪೋಷಣ್ ಟ್ರ್ಯಾಕರ್ ತಂತ್ರಾಂಶದಲ್ಲಿ ದಾಖಲಿಸಲಾಗಿದೆ. ಆ ಪೈಕಿ, 30 ಲಕ್ಷ 73 ಸಾವಿರದ 792 ಮಕ್ಕಳ ತೂಕ ಮತ್ತು ಎತ್ತರ ಅಳತೆ ಮಾಡಲಾಗಿದೆ. ಆ ಮಕ್ಕಳಲ್ಲಿ, 90 ಸಾವಿರದ 668 ಸಾಧಾರಣ ಅಪೌಷ್ಟಿಕತೆಯಿಂದ ಬಳಲುವ ಹಾಗೂ 7 ಸಾವಿರದ 187 ಮಕ್ಕಳು, ತೀವ್ರ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು ಎಂದು ಗುರುತಿಸಲಾಗಿದೆ..**

<><><>

ಯಾದಗಿರಿ, ಕೋಲಾರ ಹಾಗೂ ಮಂಡ್ಯ ಜಿಲ್ಲೆಗಳ ಕೆಲ ಅಂಗನವಾಡಿಗಳಲ್ಲಿ ಶುಚಿತ್ವ, ಆಹಾರದ ಗುಣಮಟ್ಟ ಕಾಪಾಡದೇ ಇರುವುದು ಕಳವಳಕಾರಿ ಎಂದರು.

<><><>

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ, ನಾಗಣ್ಣಗೌಡ ಹಾಗೂ 31 ಜಿಲ್ಲೆಗಳ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

ಹಾವೇರಿ ಹಾಗೂ ಬಳ್ಳಾರಿ–ವಿಜಯನಗರ ಜಿಲ್ಲೆಗಳ, ಅಚ್ಚುಕಟ್ಟು ಪ್ರದೇಶ ವ್ಯಾಪ್ತಿ ಹೊಂದಿರುವ, ವರದಾ ನದಿ ಹಾಗೂ, ಧಾರವಾಡ – ಉತ್ತರಕನ್ನಡ ಜಿಲ್ಲೆಗಳಲ್ಲಿ ಹರಿಯುವ, ಬೇಡ್ತಿ ನದಿ ಜೋಡಣೆಗೆ, ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಪ್ರಾಧಿಕಾರ, ತಾತ್ವಿಕ ಒಪ್ಪಿಗೆ ನೀಡಿದೆ ಎಂದು, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಹಾವೇರಿಯಲ್ಲಿ ಮಾತನಾಡಿದ ಅವರು, ಪರಿಸರ ಮತ್ತು ಜೀವ ವೈವಿಧ್ಯಕ್ಕೆ ಹಾನಿಯಾಗದೇ, ಜೋಡಣೆ ಮಾಡುವ ಪ್ರಸ್ತಾವವಾಗಿದೆ. ಬೇಡ್ತಿ ವರದಾ ನ್ಯಾ 'ನಲ್ ಪ್ರಾಸ್ಪೆಕ್ಟಿವ್ ಪ್ಲಾನ್, ಇನ್ನೊಂದು, ಬೇಡ್ತಿ ಧರ್ಮಾ ವರದಾ ಲಿಂಕ್, ಎರಡು ಯೋಜನೆಗಳನ್ನು ಅಭಿಯಂತರರು ರೂಪಿಸಿದ್ದಾರೆ ಎಂದರು.

<><><>

ಕೇಂದ್ರದಿಂದ, ಇನ್ನೊಂದು ವಾರದೊಳಗೆ, ರಾಜ್ಯಕ್ಕೆ 1 ದಶಾಂಶ 5 ಲಕ್ಷ ಮೆಟ್ರಿಕ್ ಟನ್, ಯೂರಿಯಾ ರಸಗೊಬ್ಬರ ಪೂರೈಕೆಯಾಗಲಿದೆ ಎಂದು, ಸಂಸದ ಬೊಮ್ಮಾಯಿ, ಭರವಸೆ ನೀಡಿದರು.

<><><>

ಕೇಂದ್ರ ಪುರಸ್ಕೃತ ಯೋಜನೆಗಳ, ಆರ್ಥಿಕ ಸೇರ್ಪಡೆ ಅಭಿಯಾನ, ವಿಜಯನಗರ ಜಿಲ್ಲೆಯ, 50 ಗ್ರಾಮ ಪಂಚಾಯಿತಿಗಳನ್ನು, ಯಶಸ್ವಿಯಾಗಿ ತಲುಪಿದೆ ಎಂದು, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವ್ಯವಸ್ಥಾಪಕ, ಕೆ.ಎಂ. ವೀರೇಂದ್ರಕುಮಾರ, ತಿಳಿಸಿದ್ದಾರೆ. ಹರಪನಹಳ್ಳಿ ತಾಲೂಕು, ಬಾಗಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, ಆಯೋಜಿಸಿದ್ದ ಆರ್ಥಿಕ ಸೇರ್ಪಡೆ ಅಭಿಯಾನದಲ್ಲಿ, ಭಾಗವಹಿಸಿ ಮಾತನಾಡಿದರು. 50ಕ್ಕೂ ಹೆಚ್ಚು ಜನ ಗ್ರಾಮಸ್ಥರು ಅಭಿಯಾನದಲ್ಲಿ ಭಾಗವಹಿಸಿ, ಮಾಹಿತಿ ಪಡೆದರು. ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಕೆ.ಎಂ. ವೀರೇಂದ್ರಕುಮಾರ.

<><><>

ಕೆ.ಎಂ. ವೀರೇಂದ್ರಕುಮಾರ ಧ್ವನಿ 39 ಸೆಕೆಂದುಗಳು

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಕಳೆದ 3 ದಿನಗಳು, ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರೊಂದಿಗೆ ಸಭೆ ನಡೆಸಿ, ಬೀದರ್ ನಿಂದ ಚಾಮರಾಜನಗರದ ವರೆಗೆ, 31 ಜಿಲ್ಲೆಗಳ ಅಭಿವೃದ್ಧಿ ಕಾರ್ಯಗಳ ಕುರಿತು, ಸಮಗ್ರ ಮಾಹಿತಿ ಪಡೆದಿದ್ದಾರೆ. ತನ್ಮೂಲಕ, 'ಸರ್ವರನ್ನೊಳಗೊಂಡ, ಸಶಕ್ತ ಜಿಲ್ಲೆ; ಸಮೃದ್ಧ ಕರ್ನಾಟಕದ ನಿರ್ಮಾಣ' ಧ್ಯೇಯಕ್ಕೆ, ರಾಜ್ಯ ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ. ಗ್ರಾಮಗಳನ್ನು ಪ್ರಗತಿಯತ್ತ ಕೊಂಡೊಯ್ಯಲು, ಮತ್ತ ್ಟ ಅನುದಾನ ಅವಶ್ಯಕತೆ ಇದೆ. ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ, ತಲಾ 50 ಕೋಟಿ ರೂಪಾಯಿ ಹೆಚ್ಚುವರಿ ಹಣ ಒದಗಿಸಲಾಗಿದೆ ಎಂದು, ಮುಖ್ಯಮಂತ್ರಿ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. 37 ಕೋಟಿ 50 ಲಕ್ಷ ರೂಪಾಯಿಗಳನ್ನು, ರಸ್ತೆ, ಸೇತುವೆ ನಿರ್ಮಾಣಕ್ಕೆ

ಉಪಯೋಗಿಸಬೇಕು. ಉಳಿದ 12 ಕೋಟಿ 50 ಲಕ್ಷ ರೂಪಾಯಿ, ಕ್ಷೇತ್ರದಲ್ಲಿ ಅಗತ್ಯ ಮೂಲಸೌಕರ್ಯ ಕಲ್ಪಿಸಲು, ಬಳಸುವಂತೆ, ಸಚಿವರು, ಶಾಸಕರಿಗೆ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(1 ನಿ. 4 ಸೆ.)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಕೃಷಿ ಇಲಾಖೆ, ರಾಜ್ಯಾದ್ಯಂತ ರಸಗೊಬ್ಬರ ಮತ್ತು ಕೀಟನಾಶಕ ಮಾರಾಟದಲ್ಲಿ ನಡೆಯುತ್ತಿರುವ ಉಲ್ಲಂಘನೆ ವಿರುದ್ಧ, ಕಠಿಣ ಕಾನೂನು ಕ್ರಮ ಕೈಗೊಂಡಿದೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯ ಸ್ವಾಮಿ ತಿಳಿಸಿದ್ದಾರೆ. ಬನ್ನೂರು, ನಂಜನಗೂಡು, ದಾವಣಗೆರೆಯಲ್ಲಿ ದಾಳಿ ನಡೆಸಿ, ರಸಗೊಬ್ಬರವನ್ನು ನಿಗದಿತ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದ, ಚಿಲ್ಲರೆ ಮಾರಾಟಗಾರರು, ರಸಗೊಬ್ಬರ ಸಗಟು ಮಾರಾಟಗಾರರು, ನಿಗದಿತ ಜಿಲ್ಲೆಯ ಚಿಲ್ಲರೆ ಮಾರಾಟಗಾರರಿಗೆ ಹಂಚಿಕೆ ಮಾಡದೇ, ಅನ್ಯ ಜಿಲ್ಲೆಗಳಿಗೆ ಮಾರಾಟ ಮಾಡಿದವರ, ಪರವಾನಗಿಯನ್ನು ಕೃಷಿ ಇಲಾಖೆ ವಿಚಕ್ಷಣ ದಳ ರದ್ದು ಪಡಿಸಿದೆ. ರಾಜ್ಯಾದ್ಯಂತ, ಕಂದಾಯ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು, ದಾಳಿಗಳನ್ನು ಮುಂದುವರೆಸಲಿದ್ದು, ರೈತರಿಗೆ ನಿಗದಿತ ಬೆಲೆಯಲ್ಲಿ, ಗುಣಮಟ್ಟದ ರಸಗೊಬ್ಬರ, ಸಕಾಲಿಕವಾಗಿ ದೊರೆಯುವಂತೆ ಮಾಡಲು, ಇಲಾಖೆ ಬದ್ಧವಾಗಿದೆ ಎಂದು, ಸಚಿವರು ಹೇಳಿದ್ದಾರೆ.

<><><>

ಕರ್ನಾಟಕ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂರಫ್ತು ನಿಗಮ –ಕಪೆಕ್ ಸಹಕಾರದಲ್ಲಿ, ಆತ್ಮನಿರ್ಭರ ಭಾರತ; ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆಯಡಿ, ಬಳ್ಳಾರಿ ಜಿಲ್ಲೆ ಶಿರಗುಪ್ಪದ ವೆಂಕಟನಾಗಲಕ್ಷ್ಮೀ ಹಾಗೂ ಶಿವಾರೆಡ್ಡಿ ದಂಪತಿ, ಮಜಾ ನೇಚರ್ ಫುಡ್ಸ್ ಕಂಪೆನಿ ಸ್ಥಾಪಿಸಿ, ಸ್ವಾವಲಂಬಿ ಆಗಿದ್ದಾರೆ. ಏಳು ಬಗೆಯ ಉಪ್ಪಿನಕಾಯಿ, ಐದು ಬಗೆಯ ಚಟ್ನಿ ಪುಡಿಗಳು ಹಾಗೂ ವಾರ್ಷಿಕ 15 ಲಕ್ಷ ವಹಿವಾಟು ಸಾಧಿಸಿರುವ ಎಂ.ಎಸ್.ಸಿ ಜೈವಿಕ ತಂತ್ರಜ್ಞಾನ ಪದವಿಧರೆ, ವೆಂಕಟನಾಗಲಕ್ಷ್ಮೀ ಶಿವಾರೆಡ್ಡಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ವೆಂಕಟನಾಗಲಕ್ಷ್ಮೀ ಧ್ವನಿ 49 ಸೆಕೆಂದುಗಳು

<><><>

ರಾಜ್ಯದಲ್ಲಿ ಒಟ್ಟು, 6 ಖಾಯಂ ಜನತಾ ನ್ಯಾಯಾಲಯಗಳಿವೆ; ಆ ಪೈಕಿ, ಕಲಬುರಗಿ ಖಾಯಂ ಜನತಾ ನ್ಯಾಯಾಲಯದಲ್ಲಿ, ಅತೀ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ ಎಂದು, ಜನತಾ ನ್ಯಾಯಾಲಯದ ಅಧ್ಯಕ್ಷ ಹಾಗೂ ಜಿಲ್ಲಾ ನ್ಯಾಯಾಧೀಶ, ಎಸ್.ಎಲ್. ಚೌವ್ಹಾಣ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಮಾತನಾಡಿದ ಅವರು, 1 ಕೋಟಿ ರೂಪಾಯಿ ವರೆಗೆ, ಪರಿಹಾರ ಅಪೇಕ್ಷಿತ ಪ್ರಕರಣಗಳನ್ನು, ಜನತಾ ನ್ಯಾಯಾಲಯದಲ್ಲಿ ಯಾವುದೇ ಶುಲ್ಕವಿಲ್ಲದೇ, ಅರ್ಜಿ ಸಲ್ಲಿಸಬಹುದು.

ಕಲಬುರಗಿ ಜನತಾ ನ್ಯಾಯಾಲಯ, ಪ್ರತಿ ತಿಂಗಳು ಸರಾಸರಿ 250 ಪ್ರಕರಣಗಳ ವಿಚಾರಣೆ ನಡೆಸಿ, ಪರಿಹಾರ ನೀಡುತ್ತಿದೆ, ಎಂದರು.

<><><>

ಪಂಚಾಯತ್ ರಾಜ್ ವ್ಯವಸ್ಥೆ ಅನುಷ್ಠಾನಕ್ಕೆ, ಗದಗ ಜಿಲ್ಲೆ ಪ್ರಯೋಗ ಶಾಲೆ ಇದ್ದಂತೆ. ಗ್ರಾಮ ಸ್ವರಾಜ ಕಾನೂನು ಸಹ, ಈ ಜಿಲ್ಲೆಯಿಂದಲೇ ಸರಿಯಾಗಿ ಅನುಷ್ಠಾನ ಆಗಲಿ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ, ಎಚ್.ಕೆ.ಪಾಟೀಲ, ಆಶಿಸಿದ್ದಾರೆ. ಗದಗ ಕೆ.ಎಚ್.ಪಾಟೀಲ ಸಭಾಂಗಣದಲ್ಲಿ, ಮಹಾತ್ಮ ಗಾಂಧೀಜಿಯ ಕನಸಿನ, ಗ್ರಾಮ ಸ್ವರಾಜ್ ಹಾಗೂ ವಿವೇಕ ಪಥ ಅನುಷ್ಠಾನ ಸಭೆ ಉದ್ಘಾಟಿಸಿ, ಮಾತನಾಡಿದರು. 'ಗ್ರಾಮ ಸ್ವರಾಜ್' ಪರಿಕಲ್ಪನೆ, ಗಾಂಧೀಜಿ ಕಂಡ ಕನಸು. ಗ್ರಾಮ ಪಂಚಾಯಿತಿಯೇ, ಸ್ಥಳೀಯ ಸರ್ಕಾರವಾಗಿ, ಗ್ರಾಮೀಣರ ಬದುಕಿನ ಗುಣಮಟ್ಟ ಉನ್ನತೀಕರಿಸಬೇಕು ಎಂದು, ಅವರು ಬಯಸಿದ್ದಾಗಿ, ತಿಳಿಸಿದರು.

<><><>

ಹುಬ್ಬಳ್ಳಿಯ, ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮೀಜಿಗಳ, 96ನೇ ಪುಣ್ಯಾರಾಧನೆ ಹಿನ್ನೆಲೆ, ನಾಳೆಯಿಂದ 10ನೇ ತಾರೀಖಿನ ವರೆಗೆ, ಶಿವನಾಮ ಸಪ್ತಾಹ ಜರುಗಲಿದೆ. ದಿನಾಂಕ 10 ರಂದು, ಸಂಜೆ 5.30ಕ್ಕೆ, ಶ್ರೀ ಸಿದ್ಧಾರೂಢರ ಜಲ ರಥೋತ್ಸವ ಜರುಗಲಿದೆ ಎಂದು, ಶ್ರೀ ಸಿದ್ಧಾರೂಢ ಸ್ವಾಮೀಜಿ ಮಠದ ಟ್ರಸ್ಟ್ ಕಮಿಟಿ ತಿಳಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪೋಷಣ್ ಟ್ರ್ಯಾಕರ್ ಮಾಹಿತಿ; 5 ವರ್ಷದೊಳಗಿನ, 7 ಸಾವಿರದ 187 ಮಕ್ಕಳು, ರಾಜ್ಯದಲ್ಲಿ, ತೀವ್ರ ಅಪೌಷ್ಟಿಕತೆಯಿಂದ, ಬಳಲಿಕೆ.
- ವರದಾ ಹಾಗೂ ಬೇಡ್ತಿ ನದಿಗಳ ಜೋಡಣೆ; ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಪ್ರಾಧಿಕಾರ, ತಾತ್ವಿಕ ಒಪ್ಪಿಗೆ.
- ರಸಗೊಬ್ಬರ ಮಾರಾಟದಲ್ಲಿ, ನಿಯಮ ಉಲ್ಲಂಘನೆ; ಕೃಷಿ ಇಲಾಖೆಯಿಂದ, ಕಠಿಣ ಕಾನೂನು ಕ್ರಮ.
- ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆ, ಯೋಜನೆ; ಬಳ್ಳಾರಿಯ ಶಿವಾರೆಡ್ಡಿ ದಂಪತಿ, ಯಶಸ್ವಿ ಉದ್ಯಮಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>